ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ ಸಂಚಿಕೆ ೩೨ ಕೊಪ್ಪ ೧೩-೨-೧೯೮೩ ಭಾನುವಾರ ಬೆಲೆ ೪೦ ಪೈಸೆ

ರಾಜ್ಯದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ:

ರಾಮಕೃಷ್ಣ ಹೆಗ್ಡೆ ಮುಖ್ಯಮಂತ್ರಿ

ಕರ್ನಾಟಕದ ಪ್ರಪ್ರಥಮ ಕಾಂಗ್ರೆಸ್ಸೇತರ ಸರ್ಕಾರದ ಮುಖ್ಯ ಮಂತ್ರಿಯಾಗಿ ರಾಮಕೃಷ್ಣ ಹೆಗ್ಡೆ ಅಧಿಕಾರ ವಹಿಸಿಕೊಂಡಿದ್ದಾರೆ.

ಅವರ ಜೊತೆ ಇನ್ನೂ ೭ ಮಂದಿ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಮೊದಲಿಗೆ ಮಂತ್ರಿ ಮಂಡಲ ಸೇರದೆ ಹೊರಗಿನಿಂದಲೇ ಬೆಂಬಲ ಕೊಡುವುದಾಗಿ ಘೋಷಿಸಿದ್ದ ಎಸ್. ಬಂಗಾರಪ್ಪ ರಾಜ್ಯದ ನಾನಾ ಕಡೆಗಳಿಂದ ಬಂದ ಒತ್ತಾಯದಿಂದಾಗಿ ಇಷ್ಟರಲ್ಲೇ ಮಂತ್ರಿ ಮಂಡಲ ಸೇರುವ ನಿರೀಕ್ಷೆಯಿದೆ. ಮಂತ್ರಿ ಮಂಡಲದ ವಿಸ್ತರಣೆ ಸದ್ಯದಲ್ಲೇ ಆಗಲಿದೆ.

ಮಂತ್ರಿಗಳ ಹೆಸರುಗಳು ಮತ್ತು ಖಾತೆಗಳು ಹೀಗಿವೆ:

ರಾಮಕೃಷ್ಣ ಹೆಗ್ಡೆ – (ಮುಖ್ಯ ಮಂತ್ರಿ), ಹಣಕಾಸು, ಯೋಜನಾ ಖಾತೆಗಳು.

ಎಸ್.ಆರ್.ಬೊಮ್ಮಾಯಿ: ವಾಣಿಜ್ಯ, ಕೈಗಾರಿಕೆ.

ಹೆಚ್.ಡಿ.ದೇವೇಗೌಡ: ಲೋಕೋಪಯೋಗಿ ಮತ್ತು ನೀರಾವರಿ.(ಸಣ್ಣ ಮತ್ತು ಮಧ್ಯಮ)

ಅಬ್ದುಲ್ ನಜೀರ್‌ಸಾಬ್: ಗ್ರಾಮೀಣ ಅಭಿವೃದ್ಧಿ

ವಸಂತರಾವ್ ಪಾಟೀಲ್: ಸಾರಿಗೆ, ಕಾರ್ಮಿಕ ಖಾತೆ

ಬಿ.ರಾಚಯ್ಯ: ಶಿಕ್ಷಣ

ಎ.ಲಕ್ಷ್ಮೀಸಾಗರ್: ಕಾನೂನು ಮತ್ತು ಸಂಸದೀಯ ವ್ಯವಹಾರಗಳು

ಚಂದ್ರಪ್ರಭಾ ಅರಸು: ಸಮಾಜ ಕಲ್ಯಾಣ ಮತ್ತು ಅಬ್ಕಾರಿ.

ರಥೋತ್ಸವ - ಜಾತ್ರೆ

ಕೊಪ್ಪ: ಕುಂಚೂರು–ಅದ್ದಡ ಗ್ರಾಮಗಳ ವನದುರ್ಗಾಪರಮೇಶ್ವರಿ ಅಮ್ಮನವರ ರಥೋತ್ಸವ ಜ. ೨೦ರಂದು ನಡೆಯುತ್ತದೆ. ೧೯ರಿಂದ ೨೨ರ ವರೆಗೆ ಜಾತ್ರೆ ನಡೆಯುತ್ತದೆ.

ಬೇಗಾರಿನ ಆಸ್ಪತ್ರೆಯಲ್ಲಿ ವೈದ್ಯರಿಂದ ಹಲ್ಲೆಗೊಳಗಾಗಿದ್ದ

ಗರ್ಭಿಣಿಯ ಶಂಕಾಸ್ಪದ ಸಾವು

ಕೊಪ್ಪ: ಜ. ೪ರ ಬೆಳಗಿನ ಜಾವ ಬೇಗಾರಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯ ಎ.ಜಿ. ಹೆಗ್ಡೆಯಿಂದ ಅತ್ಯಾಚಾರದ ಹಲ್ಲೆಗೊಳಗಾಗಿದ್ದ ಲಕ್ಷ್ಮಿ ಎಂಬ ತುಂಬು ಗರ್ಭಿಣಿ ಜ. ೧೨ರಂದು ಇಲ್ಲಿಗೆ ಸಮೀಪದ ಬಲಗಾರು ಎಂಬಲ್ಲಿ ತಮ್ಮ ತಮ್ಮನ ಮನೆಯಲ್ಲಿ ಮೃತಪಟ್ಟಿದ್ದಾರೆ.

ಈ ಬಗ್ಗೆ ಕೊಪ್ಪದ ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಪಿ.ಸಿ.ಗಣಪತಿಯವರು ತನಿಖೆ ನಡೆಸುತ್ತಿದ್ದಾರೆ. ಶವದ ಮರಣೋತ್ತರ ಪರೀಕ್ಷೆ ಮಾಡಲಾಗಿದ್ದು, ವಿಸೆರಾದ ರಾಸಾಯನಿಕ ಪರೀಕ್ಷೆಯ ವರದಿ ಬಂದ ನಂತರ ಮರಣದ ನಿಜವಾದ ಕಾರಣ ತಿಳಿಯಬೇಕಾಗಿದೆ.

ಮರಣದ ನಂತರ ಲಕ್ಷ್ಮಿಯ ಬಾಯಿ–ಮೂಗುಗಳಿಂದ ನೊರೆ ಬರುತ್ತಿತ್ತೆಂದು ಹೇಳಲಾಗಿದ್ದು, ಇದು ಆತ್ಮ ಹತ್ಯೆಯೆ ಅಥವಾ ಜ.೪ರ ಹಲ್ಲೆಯ ಕಾರಣ ಮರಣ ಸಂಭವಿಸಿದೆಯೆ ಎಂಬುದು ಪತ್ತೆಯಾಗಬೇಕಾಗಿದೆ.

ಪ್ರಕರಣದ ಹಿನ್ನೆಲೆ

ಕೂಲಿ ಕೆಲಸ ಮಾಡುವ ಚಿನ್ನನಾಯ್ಕ ಎಂಬವರ ಪತ್ನಿ ಸುಮಾರು ೩೦ ವರ್ಷದ ಲಕ್ಷ್ಮಿ ತನ್ನ ತಾಯಿ ತಿಮ್ಮಿಯೊಂದಿಗೆ ಬೇಗಾರು ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಅವರಿಬ್ಬರ ಹೇಳಿಕೆಯಂತೆ, ಜ. ೪ರ ಬೆಳಗಿನ ಜಾವ ೩ ಗಂಟೆಯ ಹೊತ್ತಿಗೆ ವೈದ್ಯ ಎ.ಜಿ.ಹೆಗ್ಡೆ ವಿಪರೀತ ಕುಡಿದು ವಾರ್ಡಿನೊಳಗೆ ಬಂದು ಲಕ್ಷ್ಮಿಯ ಮೇಲೆ ಅತ್ಯಾಚಾರ ಮಾಡಲು ಯತ್ನಿಸಿದರು. ಆಕೆಯ ಬೊಬ್ಬೆ ಕೇಳಿದ ವಾಚಮನ್‌ಗಳಾದ ಖಾಸಿಂ ಮತ್ತು ಕೃಷ್ಣ ಓಡಿಬಂದು ಡಾಕ್ಟರನ್ನು ಎಳೆದು ಕಷ್ಟದಿಂದ ಬಿಡಿಸಿದಾಗ ಲಕ್ಷ್ಮಿ ಓಡಿಹೋಗಿ ಪಕ್ಕದ ಶಾಲೆಯ ಜಗಲಿಯಲ್ಲಿ ಆಶ್ರಯ ಪಡೆದರು.

ಬೆಳಿಗ್ಗೆ ಬೇಗಾರಿನಿಂದ ಕೊಪ್ಪಕ್ಕೆ ಬರುತ್ತಿದ್ದ ಮೂಗ ಶ್ರೀನಿವಾಸ್ ತಮ್ಮ ಕಾರಿನಲ್ಲಿ ಆಕೆಯನ್ನು ಕರೆದುಕೊಂಡು ಬಂದು ಕೊಪ್ಪದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದರು

ಜ. ೮ರಂದು ಆಸ್ಪತ್ರೆಯಿಂದ ಬಿಡುಗಡೆಯಾದ ಲಕ್ಷ್ಮಿ ಬಲಗಾರಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು.

ಹಲ್ಲೆಯ ಬಗ್ಗೆ ಶೃಂಗೇರಿ ಠಾಣಾಧಿಕಾರಿ ಕೆ.ರಮಾನಂದ ರೈ ತನಿಖೆ ನಡೆಸುತ್ತಿದ್ದರು. ಸ್ಥಳೀಯ ಜನರ ಕೋಪಾವೇಶದಿಂದ ತಪ್ಪಿಸಿಕೊಳ್ಳಲು ಹೆಗ್ಡೆ ಕೆಲವು ದಿನ ರಜೆಯ ಮೇಲೆ ಹೋಗಿದ್ದರೆನ್ನಲಾಗಿದೆ.

ಬಹಳ ಬುದ್ಧಿವಂತರು, ದಕ್ಷರು ಎಂದು ಪ್ರಾರಂಭದಲ್ಲಿ ಖ್ಯಾತಿಗಳಿಸಿದ್ದ **ಎ.ಜಿ.ಹೆಗ್ಡೆ ನಮ್ಮ ಹೊಸ ಮುಖ್ಯ ಮಂತ್ರಿ ರಾಮಕೃಷ್ಣ ಹೆಗ್ಡೆಯವರ ಸಂಬಂಧಿ** ಎನ್ನಲಾಗಿದೆ. ಇದು ಬೆಳಕಿಗೆ ಬಂದ ಅವರ ಎರಡನೆಯದೋ ಮೂರನೆಯದೋ ಪ್ರಕರಣವಾಗಿದ್ದು, ಪರೀಕ್ಷೆ ಮತ್ತು ತನಿಖೆಗಳ ಎಲ್ಲ ಹಂತಗಳೂ ನಿಷ್ಪಕ್ಷಪಾತವಾಗಿ ನಡೆಯುತ್ತವೆಯೋ, ಕಾದು ನೋಡಬೇಕಾಗಿದೆ.

ಕೃತಜ್ಞತೆಗಳು

ದಿನಾಂಕ ೫-೧-೧೯೮೩ರಂದು ನಡೆದ ಶೃಂಗೇರಿ ಕ್ಷೇತ್ರದ ವಿಧಾನ ಸಭಾ ಚುನಾವಣೆಯಲ್ಲಿ ಅಧಿಕ ಬಹುಮತ ದಿಂದ ನನ್ನನ್ನು ಚುನಾಯಿಸಿದ ಮತದಾರರಿಗೂ, ನನ್ನ ಗೆಲುವಿಗಾಗಿ ಹಗಲಿರುಳು ಶ್ರಮವಹಿಸಿದ ಎಲ್ಲಾ ಕಾರ್ಯಕರ್ತರಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಸ್ನೇಹಿತರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತಾ,

ಈ ಕ್ಷೇತ್ರದ ಅಭಿವೃದ್ಧಿಗೆ ನಿಷ್ಪಕ್ಷಪಾತವಾದ ಸೇವೆ ಸಲ್ಲಿಸಲು ಸದಾ ಸಹಕಾರ ಕೋರುತ್ತೇನೆ.

ಇಂತು ತಮ್ಮ ವಿಶ್ವಾಸಿ,

ಹೆಚ್.ಜಿ.ಗೋವಿಂದಗೌಡ,

ವಿಧಾನ ಸಭಾ ಸದಸ್ಯ,

ಶೃಂಗೇರಿ ಕ್ಷೇತ್ರ.

ಹಾಲು ಸಂಗ್ರಹಣೆ ಕೇಂದ್ರ ಆರಂಭಿಸಲು ಎಮ್ಮೆ ಪಡೆದ ಬಡವರ ಮನವಿ

ನಿಲುವಾಗಿಲು: ಸರ್ಕಾರದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಸಾಲದ ಮೂಲಕ ಎಮ್ಮೆಗಳನ್ನು ಕೊಂಡಿರುವ ಈ ಸುತ್ತ ಮುತ್ತಿನ ಬಡವರು ಕೂಡಲೇ ಹಾಲು ಸಂಗ್ರಹಣೆ ಕೇಂದ್ರ ಪ್ರಾರಂಭಿಸುವಂತೆ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಇಲ್ಲಿನ ವಿನಾಯಕ ಸೇವಾ ಸಹಕಾರ ಸಂಘ ಈ ವರೆಗೆ ೧೨ ಎಮ್ಮೆಗಳನ್ನು, ೬ ಜೊತೆ ಎತ್ತುಗಳನ್ನು ಹಾಗೂ ೪ ಜನರಿಗೆ ವ್ಯಾಪಾರ ಸಾಲವನ್ನು ಕೊಟ್ಟಿದೆ. ಇನ್ನೂ ಎಮ್ಮೆ ಕೊಡುವುದು ಇದೆಯಂತೆ. ಎಮ್ಮೆ ಕೊಟ್ಟು ಸುಮಾರು ಒಂದೂವರೆ ತಿಂಗಳಾಯಿತು. ಕೂಡಲೇ ಹಾಲು ಶೇಖರಿಸುವ ಕೇಂದ್ರ ತೆರೆಯಲಾಗುವುದೆಂದು ಆಶ್ವಾಸನೆ ಕೊಡಲಾಗಿತ್ತು. ಆದರೆ ಇನ್ನೂ ತೆರೆದಿಲ್ಲ.

ಹಾಲನ್ನು ಮಾರೋಣವೆಂದರೆ ಇಲ್ಲಿ ಮತ್ತು ಶಾನೊಳ್ಳಿಯಲ್ಲಿ ಒಟ್ಟು ದಿನಕ್ಕೆ (ಹೋಟೆಲುಗಳಿಗೆ) ೧೦ ಲೀಟರಿಗಿಂತ ಹೆಚ್ಚು ಹಾಲು ಬೇಡ. ಆದರೆ ದಿನಕ್ಕೆ ಸುಮಾರು ೩೦ರಿಂದ ೪೦ ಲೀಟರ್ ಹಾಲು ಹೊಸದಾಗಿ ಉತ್ಪಾದನೆಯಾಗುತ್ತಿದೆ. ಅದನ್ನು ಕೊಪ್ಪಕ್ಕಾಗಲೀ ಬೇರೆಲ್ಲಿಗಾಗಲೀ ಒಯ್ದು ಮಾರುವುದು ಸಾಧ್ಯವೇ ಇಲ್ಲ. ಹೀಗಿರುವಾಗ ಹಾಲು ಶೇಖರಣೆಗೆ ಕೂಡಲೇ ವ್ಯವಸ್ಥೆ ಆಗದಿದ್ದರೆ ಎಮ್ಮೆ ಕೊಂಡವರ ಪರಿಸ್ಥಿತಿ ತೀವ್ರ ಕಷ್ಟಕ್ಕೆ ಸಿಕ್ಕುತ್ತದೆಂದು 'ಸಾಲಗಾರರು' ಹೇಳುತ್ತಾರೆ.

ಅತ್ತ ಕೂಲಿಗೂ ಹೋಗುವಂತಿಲ್ಲ....

ಈ ಎಮ್ಮೆ ಸಾಲ ಪಡೆದವರಲ್ಲಿ ಬಹುಪಾಲು ಜನ ಕೂಲಿ ಮಾಡಿ ಬದುಕುವವರು. ಈ ಎಮ್ಮೆಯ 'ಸಹವಾಸದಿಂದಾಗಿ' ಈಗ ನೆಟ್ಟಗೆ ಕೂಲಿಗೂ ಹೋಗುವಂತಿಲ್ಲ ಎಂದು ಅವರು ಹೇಳುತ್ತಾರೆ. ಕೂಲಿಗೆ ಹೋದರೆ ಇತ್ತ ಎಮ್ಮೆಗೆ–ಕರುವಿಗೆ ಗಾಳಿಯೇ ಆಹಾರ. ಕೆಲವರ ಮನೆಗಳಲ್ಲಂತೂ ಗಂಡ-ಹೆಂಡತಿ ಕೂಲಿಗೆ, ಹುಡುಗರು ಕೂಲಿಗೆ ಅಥವಾ ಸ್ಕೂಲಿಗೆ ಹೋದರೆ ಮನೆ ಖಾಲಿ. ಯಾರಾದರೂ ಎಮ್ಮೆ–ಕರು ಬಿಚ್ಚಿಕೊಂಡು ಹೋದರೂ ಕೇಳುವವರಿಲ್ಲ ಎನ್ನಲಾಗಿದೆ.

ಮೇವು, ಕೊಟ್ಟಿಗೆ ವ್ಯವಸ್ಥೆ ಆಗಿಲ್ಲ

ಎಮ್ಮೆ ಸಾಲದ ಜೊತೆಗೆ ಅದರ ಕೊಟ್ಟಿಗೆ ಹಾಗೂ ಕೆಲವು ತಿಂಗಳ ಮೇವಿಗಾಗಿ ಪ್ರತ್ಯೇಕ ಅಂಶಗಳಿರುತ್ತವೆ. ಆದರೆ ಇಲ್ಲಿ ಆ ಬಗ್ಗೆ ವ್ಯವಸ್ಥೆ ಆಗಿಲ್ಲವೆಂದು ತಿಳಿದು ಬಂದಿದೆ. ಅಷ್ಟೇ ಅಲ್ಲ, ಒಟ್ಟು ಸಾಲ ಎಷ್ಟು, ಬಡ್ಡಿ ಎಷ್ಟು, ಕಂತು ಎಷ್ಟು, ಯಾವಾಗ ಕಟ್ಟಬೇಕು—ಈ ಯಾವ [illegible] ರವನ್ನೂ ಸಾಲಗಾರರಿಗೆ ಸರಿಯಾಗಿ ತಿಳಿಸಿಲ್ಲವೆನ್ನಲಾಗಿದೆ. ಬಡ್ಡಿಯ ಲೆಕ್ಕಾಚಾರವನ್ನು ಹಾಲಿನ ಸೊಸೈಟಿ ಪ್ರಾರಂಭಿಸಿದ ನಂತರ [illegible] ಮಾಡುತ್ತಾರೆ ಎಂದು ತಮಗೆ ನಂಬಿಸಿದ್ದಾರೆ.

(೧ನೇ ಪುಟಕ್ಕೆ)

ಸಂತಾಪ

ಜಯಪುರದ ಕೋಟೆಗದ್ದೆ ಕೆ.ಜಿ. ವೀರಪ್ಪಗೌಡ (೫೫) ಜ. ೮ರಂದು ಹೃದಯಾಘಾತದಿಂದ ನಿಧನರಾದರು. ಪ್ರಗತಿಪರ [illegible] ರಾಗಿದ್ದ ಇವರು 'ಮುಂಜಾವು'ಗೆ ಜಯಪುರದ ಪ್ರತಿನಿಧಿಯಾಗಿದ್ದರು. ಅವರ ನಿಧನಕ್ಕೆ ಸಂತಾಪ ಸೂಚಿಸುತ್ತೇನೆ.

—ಸಂಪಾದಕ

'ಮುಂಜಾವು'

ಚಂದಾ ದರ: ಆಜೀವ ಚಂದಾ ೨೦೦ರೂ:

ವಾರ್ಷಿಕ ಚಂದಾ ೨೦ರೂ:

ಭ್ರಷ್ಟಾಚಾರ ನಿರ್ಮೂಲನ - ದಕ್ಷ ಆಡಳಿತ

ಸಿರಿಮನೆ ನಾಗರಾಜ್

ಕರ್ನಾಟಕದಲ್ಲಿ ಐತಿಹಾಸಿಕವಾದ ರೀತಿಯಲ್ಲಿ ಕಾಂಗ್ರೆಸ್ ಅಲ್ಲದ ಸರ್ಕಾರವೊಂದರ ರಚನೆಯಾಗಿದೆ. ಹೊಸದಾಗಿ ಅಧಿಕಾರ ವಹಿಸಿಕೊಳ್ಳುತ್ತಿರುವ ಜನತಾ ಪಕ್ಷದ ನಾಯಕರುಗಳು ಭ್ರಷ್ಟಾಚಾರ ನಿರ್ಮೂಲನ ಮಾಡುತ್ತೇವೆ, ಬೆಲೆ ಇಳಿಸುತ್ತೇವೆ, ಸರ್ಕಾರದ ಕೆಲಸದಲ್ಲಿ ದಕ್ಷತೆ ಮೂಡಿಸುತ್ತೇವೆ, ಕಾರ್ಮಿಕರ ಜೀವನ ಮಟ್ಟ ಹೆಚ್ಚಿಸುತ್ತೇವೆ, ನಿರುದ್ಯೋಗ ನಿವಾರಿಸುತ್ತೇವೆ ಮುಂತಾಗಿ 'ಗಂಭೀರವಾದ' ಆಶ್ವಾಸನೆಗಳನ್ನು ಕೊಡುತ್ತಿದ್ದಾರೆ. ಚುನಾವಣೆಗೆ ಮೊದಲೂ ಅದೇ ಅವರ ಘೋಷಣೆಯಾಗಿತ್ತು.

ಜನರೇನೋ ಈ ಆಶ್ವಾಸನೆಗಳನ್ನು ನಂಬಿರುವಂತೆ ಕಾಣುತ್ತದೆ. ಈ ಸಮಸ್ಯೆಗಳಿಂದ ಜನ ತತ್ತರಿಸಿದ್ದರು, ರೋಸಿಹೋಗಿದ್ದರು ಎಂಬುದಂತೂ ಸ್ಪಷ್ಟವಿದೆ. ಆದ್ದರಿಂದಲೇ, ಸರ್ಕಾರದ ಬದಲಾವಣೆಯಿಂದಲಾದರೂ ಇವು ಬಗೆಹರಿದಾವೇನೊ ಎಂಬ ಆಸೆಯಿಂದ ಜನ ವಿರೋಧ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ.

ಆದರೆ, ಈ ಸಮಸ್ಯೆಗಳು ಎಲ್ಲಿ ಹುಟ್ಟುತ್ತವೆ, ಅವುಗಳ ಸಂಪೂರ್ಣ ನಿವಾರಣೆಗೆ ಎಂಥ ಪರಿಸ್ಥಿತಿ ಬೇಕು, ಹಾಲಿ ಸರ್ಕಾರದಿಂದ ಅವುಗಳ ನಿವಾರಣೆ ಎಷ್ಟರ ಮಟ್ಟಿಗೆ ಸಾಧ್ಯವಾದೀತು, ಜನ ಎಷ್ಟು ನಿರೀಕ್ಷಿಸಬಹುದು ಮುಂತಾದ ವಿಷಯಗಳನ್ನು ಸ್ವಲ್ಪ ಆಲೋಚಿಸಬೇಕು.

ಭ್ರಷ್ಟಾಚಾರ–ಲಂಚಗುಳಿತನ ಇವತ್ತು ದೇಶದ ಎಲ್ಲ ರಂಗಗಳಲ್ಲೂ ತುಂಬಿ ಹೋಗಿದೆ. ಅಧಿಕಾರದಲ್ಲಿರುವವರು ಭ್ರಷ್ಟಾಚಾರವನ್ನು ಮಾತ್ರ ಅವಲಂಬಿಸಿ ಬದುಕಿದ್ದಾರೇ ಹೊರತು ಯಾವುದೇ ಶಿಷ್ಟಾಚಾರವನ್ನಲ್ಲ. ಹಾಗಂತ ಜನ, ಪತ್ರಿಕೆಗಳು, ವಿರೋಧ ಪಕ್ಷಗಳು ಅದನ್ನು ಎತ್ತಿ ತೋರಿಸಿದರೆ ರಾಷ್ಟ್ರದ ಅತ್ಯುನ್ನತ ನಾಯಕಿ ಶ್ರೀಮತಿ ಇಂದಿರಾ ಗಾಂಧಿ ಹೇಳುತ್ತಾರೆ—"ಭ್ರಷ್ಟಾಚಾರ ನಮ್ಮ ದೇಶದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲೇ ತುಂಬಿದೆ". ಅಂದರೆ 'ಅದನ್ನು ಹಾಗೆಲ್ಲ ಹೋಗಲಾಡಿಸುವುದಕ್ಕೆ ಆಗುವುದಿಲ್ಲ' ಅಂತ! ಭ್ರಷ್ಟಾಚಾರ ಇಲ್ಲದ ಅಥವಾ ಇಷ್ಟೆಲ್ಲ ವ್ಯಾಪಕವಾಗಿ, ಇಡೀ ಜನಜೀವನವನ್ನೇ ನುಂಗಿಹಾಕುವಂಥ ಪ್ರಮಾಣದಲ್ಲಿ ಭ್ರಷ್ಟಾಚಾರ ಇಲ್ಲದ [illegible] ದೇಶಗಳಿವೆ. ಅದನ್ನು ಅವರು ನಮಗೆ ಹೇಳುವುದಿಲ್ಲ.

ಭ್ರಷ್ಟಾಚಾರವನ್ನು ಅಥವಾ ಅಂಥ ಯಾವುದೇ ಸಮಾಜ ವಿರೋಧಿ ಚಟುವಟಿಕೆಯನ್ನು ಯಾವುದೇ ಮಟ್ಟದಲ್ಲಿ ಬೇಕಾದರೂ ಸದೆ ಬಡಿಯಲು ಅವರಿಗೆ ಬೇಕಾದಷ್ಟು ಬಹುಮತದ ಅಧಿಕಾರ ಇದೆ. ಆದರೆ, ಆ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುವ ಬದಲು ಅವರು "ಕೇವಲ ೪೦ ಡಾಲರ್ ಬಂಡವಾಳದೊಂದಿಗೆ ರಜಿಸ್ಟರ್ ಆಗಿದ್ದ "ಕುವೊ ತೈಲ" ಸಂಸ್ಥೆ"ಗೆ ಕೋಟ್ಯಂತರ ರೂ. ಬೆಲೆಯ ತೈಲವನ್ನೊದಗಿಸುವ ಕಂಟ್ರಾಕ್ಟ್ ವಹಿಸಿ, ಅದು ಪ್ರಶ್ನಿತವಾದಾಗ ಇಡೀ ವಹಿವಾಟಿನ ಫೈಲನ್ನೇ ನಾಪತ್ತೆಯಾಗಿಸಿ, ಭ್ರಷ್ಟಾಚಾರದ ಇತಿಹಾಸದಲ್ಲಿ ಪ್ರಪಂಚಕ್ಕೇ ಹೆಸರು ಮಾಡಿದರು ಶ್ರೀಮತಿ ಗಾಂಧಿ.

ಅದೇ ರೀತಿ ಕರ್ನಾಟಕದಲ್ಲಿ ಜಲವಿದ್ಯುತ್ ಯೋಜನೆಗಳಿಗೆಂದು ತಂದ ಸಿಮೆಂಟನ್ನು ಬೆಂಗಳೂರಿನ ಬಹು ಅಂತಸ್ತುಗಳ ಕಟ್ಟಡಗಳ ಕೋಟ್ಯಾಧೀಶರಿಗೆ ದಾಟಿಸಿ, ಅರಗಿಸಿಕೊಂಡದ್ದು: ಬೆಲೆ ಕಟ್ಟಲಿಕ್ಕೇ ಆಗದ ಅಮೂಲ್ಯವಾದ ಕಾಡನ್ನು ೩೦ ವರ್ಷಗಳ ಕಾಲ ಕಡಿಯಲು ಲೈಸೆನ್ಸ್ ಕೊಟ್ಟು ತೀವ್ರ ವಿರೋಧ ಬಂದಾಗ ವಿಧಾನ ಸಭೆಯಲ್ಲಿ "ಕ್ಷಮಿಸಿ" ಎಂದು ಹೇಳಿ ಅರಗಿಸಿಕೊಂಡದ್ದು—ಮುಂತಾಗಿ ತಮ್ಮ ನಾಯಕಿಯನ್ನು ವಿವಿಧ ಹಂತದವರು ಅನುಕರಿಸಿದರು.

ಹೀಗೆ ಭ್ರಷ್ಟಾಚಾರ ದೇಶದ ಅತ್ಯುನ್ನತ ನಾಯಕರಿಂದ ಹುಟ್ಟುತ್ತದೆ ಎಂದು ಬಹಳ ಜನ ಭಾವಿಸುತ್ತಾರೆ. ನಾಯಕರು ಬಿಗಿಯಾದರೆ ಎಲ್ಲಾ ಅಧಿಕಾರಿಗಳೂ, ಲಂಚ-ಭಕ್ಷೀಸು ಕೊಡುವ – ತೆಗೆದುಕೊಳ್ಳುವ ಎಲ್ಲರೂ ನೆಟ್ಟಗಾಗುತ್ತಾರೆ ಎಂದು ಹೇಳುತ್ತಾರೆ. ಆದರೆ ನಮ್ಮಲ್ಲಿರುವ ಪರಿಸ್ಥಿತಿ ಎಂದರೆ, ಜನಹಿತದ ಅಥವಾ ಸರ್ಕಾರದ ಇತರ ಚಟುವಟಿಕೆಗಳಲ್ಲಿ ಜನರ ಭಾಗವಹಿಸುವಿಕೆ ಇಲ್ಲ. ಎಲ್ಲವನ್ನೂ ಸರ್ಕಾರ ಮಾಡಲಿ ಎಂದು ಜನ ಆಕಡೆ ನೋಡುತ್ತಾರೆ. ಹೀಗಾಗಿ ಸರ್ಕಾರ ನಡೆಸಲು ಆಳುವವರು ಅಧಿಕಾರಶಾಹಿಗಳ (ಬ್ಯೂರೋಕ್ರಾಟ್ಸ್) ಹಿಂಡಿನ ಮೇಲೆ ಸಂಪೂರ್ಣವಾಗಿ ಅವಲಂಬಿಸಬೇಕಾಗುತ್ತದೆ, ಜನರ ಶಕ್ತಿಯ, ಸಹಕಾರದ ಮೇಲಲ್ಲ. ಅಧಿಕಾರಿಗಳು — ನೌಕರವರ್ಗದವರು ಸಹ ಸಾಕಷ್ಟು ಸಂಘಟಿತರು ಬೇರೆ. ಅವರನ್ನು ಎದುರು ಹಾಕಿಕೊಳ್ಳುವ ತಾಕತ್ತು ಯಾವ ಮಂತ್ರಿಗೂ ಸರ್ಕಾರಕ್ಕೂ ಈವರೆಗೆ ಬಂದಿಲ್ಲ. ಸರ್ಕಾರದ ಕಣ್ಣು ತಪ್ಪಿಸಿ ಅವ್ಯವಹಾರ ಮಾಡಲು ಅಧಿಕಾರಿ—ನೌಕರರುಗಳಿಗೆ ಸಾಧ್ಯವಿಲ್ಲವೆ?

ಅಂದರೆ, ನಮ್ಮ ದೇಶದ ಇವತ್ತಿನ ಪರಿಸ್ಥಿತಿಯಲ್ಲಿ, ಬರೀ ಆಳುವವರು ಮಾತ್ರ ಸರಿಯಾದ ಮಾತ್ರಕ್ಕೆ ದೇಶದಲ್ಲಿ ಭ್ರಷ್ಟಾಚಾರ ಪೂರ್ತಿ ನಿರ್ಮೂಲವಾಗುತ್ತೆನ್ನಲು ಸಾಧ್ಯವಿಲ್ಲ. ಏಕೆಂದರೆ, ತನ್ನ ಪ್ರತಿ ಹೆಜ್ಜೆಯಲ್ಲೂ ಜನರನ್ನು ಪೂರ್ತಿಯಾಗಿ ತೊಡಗಿಸಿ ತನ್ನ ಜೊತೆ ಒಯ್ಯಬಲ್ಲ ಶಕ್ತಿ ಸರ್ಕಾರಕ್ಕಿಲ್ಲದ್ದರಿಂದ ಅದರ ಪ್ರಯತ್ನಗಳನ್ನು ಭ್ರಷ್ಟಾಚಾರಿಗಳು ಸೋಲಿಸಬಲ್ಲರು.

ಹಾಗಾದರೆ ದೇಶದಲ್ಲಿನ ಭ್ರಷ್ಟಾಚಾರದ ಮೂಲ ಬೇರೆಯೇ ಇದೆ ಎಂದಾಯಿತು. ಭ್ರಷ್ಟಾಚಾರಿಗಳಿಗೆ ಉಳಿಯಲು, ಬೆಳೆಯಲು ಬೇಕಾದ ಆಹಾರ ಬೇರೆಯೇ ಕಡೆಯಿಂದ ಒದಗುತ್ತೆ ಎಂದಾಯಿತು. ಆ ಮೂಲ ಯಾವುದು? ಭ್ರಷ್ಟತೆ ಎಲ್ಲಿ ಹುಟ್ಟುತ್ತದೆ, ಅದಕ್ಕೆ ಆಶ್ರಯ ಕೊಡುವ ಶಕ್ತಿ ಏನು?

ಸ್ವಲ್ಪ ನಮ್ಮ ಸಮಾಜವನ್ನು ಸರಿಯಾಗಿ ಅಭ್ಯಾಸ ಮಾಡಿದರೆ, ಇವತ್ತಿನ ನಮ್ಮ ಸಮಾಜದ ಇಡೀ ಜನವರ್ಗವೇ ಭ್ರಷ್ಟತೆಯ ಉಗಮಸ್ಥಾನ ಎಂದು ತಿಳಿಯುತ್ತದೆ. ಹೇಗೆಂದರೆ—ಇವತ್ತಿನ ಸಮಾಜದಲ್ಲಿ ಹಣವೇ ಜೀವನದ ಸರ್ವಸ್ವ. ಎಂಥ ಉಗ್ರ ಸಮಸ್ಯೆಯೇ ಆದರೂ ಅದರ ಕಾವು ಹಣವಂತನಿಗೆ ತಟ್ಟುವುದಿಲ್ಲ. ಸಮಾಜದಲ್ಲಿ ಸಂಪತ್ತೇ ಗೌರವವನ್ನೂ ಸೌಕರ್ಯವನ್ನೂ ತಂದುಕೊಡುವ ಏಕೈಕ ಸಾಧನ. ಅದನ್ನು ಹೇಗೆ ಗಳಿಸಿದ್ದು ಎಂಬುದು ಪ್ರಶ್ನೆಯೇ ಅಲ್ಲ. [ಆ ಗಳಿಕೆಯಲ್ಲಿ ಒಂದು ಚಿಕ್ಕಚೂರು ಪಾಲನ್ನು ವಿದ್ಯಾಸಂಸ್ಥೆಗೆ, ದೇವಸ್ಥಾನಕ್ಕೆ, ಆಸ್ಪತ್ರೆಗೆ ಅಂತ ದಾನ ಮಾಡಿ ಬಿಟ್ಟರಂತೂ ಅವನನ್ನು ಮತ್ತೆ ಯಾರೂ ಪ್ರಶ್ನಿಸುವ ಹಾಗೇ ಇಲ್ಲ. ಅವನು ದೇವತೆಗಳ ಸಾಲಿಗೆ ಸೇರಿ ಬಿಡುತ್ತಾನೆ.] ಇಂಥ ಸಂಪತ್ತನ್ನು, ಆಸ್ತಿ, ಸ್ವತ್ತುಗಳನ್ನು ಯಾರು ಎಷ್ಟು ಬೇಕಾದರೂ ಮಾಡಿಕೊಳ್ಳಬಹುದಾಗಿದೆ. ಅದಕ್ಕೆ ಕಣ್ಣೊರೆಸುವ ಕಾನೂನಿನ ಮಿತಿ ಇದೆಯೇ ಹೊರತು ನಿಜವಾಗಿ ಯಾರೂ ಪ್ರಶ್ನಿಸುವುದಿಲ್ಲ. "ದೇವರು ಕೊಟ್ಟದ್ದು...." ಅಂತ ಸಮಾಜದಲ್ಲಿ ಅದಕ್ಕೆ ಮನ್ನಣೆಯೇ.

ಹೀಗಿರುವಾಗ ಸಮಾಜದ ಪ್ರತಿಯೊಬ್ಬನೂ ತನಗೆ ಕಾನೂನುಬದ್ಧವಾಗಿ, ನ್ಯಾಯಬದ್ಧವಾಗಿ ಸಲ್ಲಬೇಕಾದ್ದಕ್ಕಿಂತ ಹೆಚ್ಚಾಗಿ ಗಳಿಸಲು ಇಷ್ಟಪಡುತ್ತಾನೆ. ಬೇರೆಯವರಿಗಿಂತ ತನಗೇ ಹೆಚ್ಚಿನ ಪಾಲು ದಕ್ಕಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆಸ್ತಿಗೆ, ಸಂಪತ್ತಿಗೆ ಏನೂ ಅವಕಾಶವೇ ದೊರೆಯದಿರುವ ವಿಶಾಲ ಜನವರ್ಗಗಳಲ್ಲೂ ಸಹ ಯಾವನಿಗಾದರೂ ಚೂರು ಪಾರು ಅವಕಾಶ ಸಿಕ್ಕರೂ ಅವನು ಇದೇ ಪ್ರವೃತ್ತಿ ತೋರಿಸುತ್ತಾನೆ. ಇನ್ನು, ಅತೀ ಲಾಭದ ಆಸೆ, ಸುಲಭದಲ್ಲಿ ರಾಶಿ ಗಳಿಸುವ ಆಸೆಗಳಂತೂ ಎಲ್ಲೆಲ್ಲೂ ಇವೆ. ಆದರೆ ಇವಕ್ಕೆಲ್ಲ ಕಾನೂನು ಎಂಬ (ದುರ್ಬಲ) ಅಡ್ಡಿಯೊಂದಿರುವಾಗ ಕಾನೂನುಬಾಹಿರವಾಗಿಯೇ ನಡೆಯಬೇಕಾಗುತ್ತದೆ. ಆಗ ಭ್ರಷ್ಟಾಚಾರ ಹುಟ್ಟಿ ವ್ಯಾಪಿಸುತ್ತದೆ. ಅಲ್ಲವೆ?

ಇವತ್ತು ಸಾಮಾನ್ಯವಾಗಿ ಎಲ್ಲರೂ ಇಂಥ ಪ್ರವೃತ್ತಿಯನ್ನೇ ಹೊಂದಿದ್ದರೂ ಇದು ಎಲ್ಲ ಜನರ ಸಹಜ ಪ್ರವೃತ್ತಿಯೇನೂ ಅಲ್ಲ. ಸರಿಯಾದ ಅವಕಾಶವಿದ್ದಾಗ, ಅಂದರೆ ಸಾಮಾನ್ಯವಾಗಿ ಎಲ್ಲರ ಜೀವನದ ದಿನನಿತ್ಯದ ಅಗತ್ಯಗಳೆಲ್ಲ ಪೂರೈಸುವಂತಿದ್ದಾಗ ಹಾಗೂ ಸಂಪತ್ತಿಗೆ ನ್ಯಾಯವಾದ ಮಿತಿಯಿದ್ದಾಗ, ಹೆಚ್ಚಿನ ಜನ ಪ್ರಾಮಾಣಿಕರಾಗಿಯೇ ಇರುತ್ತಾರೆ.

ಆದ್ದರಿಂದ ಜನ ಸಮುದಾಯದಲ್ಲಿ ಈ ಪ್ರಜ್ಞೆ ಮೂಡಬೇಕು. ಈ ಹಂತದವರೆಗೂ ಬೆಳೆಯಬಲ್ಲ ಪ್ರಜ್ಞೆ ಜನರಲ್ಲಿ ಮೂಡುತ್ತಿದೆ ಎಂಬುದಕ್ಕೆ ಈ ಸಲದ ಚುನಾವಣೆಯೇ ಒಂದು ದಿಕ್ಸೂಚಿ. ಅಂಥ ಪ್ರಜ್ಞೆ ಬೆಳೆದಾಗ, ಅದರ ಜೊತೆಯಲ್ಲೇ ಜನರ ಮಧ್ಯದಿಂದಲೇ ಹುಟ್ಟಿಬರುವ ಮುಂದಾಳುಗಳು ಆಡಳಿತ ಸೂತ್ರ ವಹಿಸಿಕೊಳ್ಳುತ್ತ, ಸಮಾಜದಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಿಲ್ಲದಂಥ ಒಂದು ವಾತಾವರಣ ಸೃಷ್ಟಿಯಾಗಲು ಕ್ರಮ ತೆಗೆದುಕೊಳ್ಳುತ್ತಾರೆ. ಇದು ಜನರ ಪೂರ್ಣ ಬೆಂಬಲವನ್ನು ಪಡೆದಿರುವುದರಿಂದ ಆಗ ಯಶಸ್ವಿಯಾಗುತ್ತದೆ; ಅದಕ್ಕೆ

(೩ನೇ ಪುಟಕ್ಕೆ)

ಪಲಾಯನವಾದಿ ಸಿನಿಮಾ

ಭವಾನಿಶಂಕರ್, ಕೊಪ್ಪ.

ಇತ್ತೀಚೆಗೆ ನಾನು ಎರಡು ಸಿನಿಮಾ ನೋಡಿದೆ. 'ಹೆಣ್ಣಿನ ಸೇಡು' ಮತ್ತು 'ಅರ್ಚನಾ'. ನೀವೂ ನೋಡಿರಬಹುದೆಂದು ಭಾವಿಸಿ ಅದನ್ನು ವಿಮರ್ಶೆಗೆ ಆರಿಸಿದ್ದೇನೆ.

ಸಮಾಜದ ಮೇಲೆ ಶೀಘ್ರ, ತೀವ್ರ ಪ್ರಭಾವ ಹಾಗೂ ಮಿಂಚಿನ ಪ್ರತಿಕ್ರಿಯೆ ಹುಟ್ಟಿಸಬಲ್ಲ ಮಾಧ್ಯಮ ಸಿನಿಮಾ. ಈ ಮಾಧ್ಯಮದ ಅರಿವಿಲ್ಲದವರು ಅದನ್ನು ಕೇವಲ ದುಡ್ಡು ಮಾಡುವ ಉದ್ದೇಶಗಳಿಗಾಗಿ ಮಾತ್ರ ಬಳಸಿಕೊಳ್ಳುತ್ತಿದ್ದಾರೆ. ಜನರ ಅಭಿರುಚಿಯನ್ನು ಹಾಳುಮಾಡುತ್ತಿದ್ದಾರೆ, ಅವರನ್ನು ಪಲಾಯನವಾದಿಗಳನ್ನಾಗಿ ಮಾಡುತ್ತಿದ್ದಾರೆ.

ಹೆಣ್ಣು ಈ ರೀತಿಯಲ್ಲಿ ಸೇಡು ತೀರಿಸುವುದು ನಮ್ಮ ಸಾಮಾಜಿಕ ಸಂದರ್ಭದಲ್ಲಿ ಸಾಧ್ಯವೆ? ಹೆಣ್ಣೊಬ್ಬಳು ಆ ಮಟ್ಟಿಗೆ ಹೋರಾಟ ನಡೆಸಬಲ್ಲಳೆ? ಈ ಸಿನಿಮಾ ನೋಡಿದ ಹೆಣ್ಣುಗಳು ಹಾಗೆ ಮಾಡಬಲ್ಲರೆ? ಚಿತ್ರ ನೋಡುತ್ತಾ ತಮಗೆ ಸಮಾಜದಿಂದ ಆದ ಅವಹೇಳನ, ಅನ್ಯಾಯಗಳನ್ನು ನೆನಪಿಸಿಕೊಂಡು ಅದಕ್ಕೆ ಬೀಳುವ ಹೊಡೆತ ಕಂಡು ಸಂತೋಷ ಪಡುತ್ತಾರೆ. ಆದರೆ ಹೊರಗಡೆ ಬಂದ ಅನಂತರ ಅದೇ ಕೆಟ್ಟ ಬದುಕು ಪುಗ್ಗ ಪುಸ್ ಎಂದು ಒಡೆದು ಹೋದಂತಾಗುತ್ತದೆ. ಒಟ್ಟಿನಲ್ಲಿ ಈ ಚಿತ್ರ ಜನತೆಗೆ ಶುದ್ಧ ಮನರಂಜನೆ ಆಗಲಿ, ಸಮಸ್ಯೆಯ ಆಳವನ್ನಾಗಲಿ, ಅದನ್ನೆದುರಿಸಬೇಕಾದ ರೀತಿಯನ್ನಾಗಲಿ ಕಲಾತ್ಮಕವಾಗಿ ಹೇಳಿಕೊಡುವುದಿಲ್ಲ.

ದ್ವಿಪಾತ್ರದ ಗೀತಾಳದ್ದು ಅತೀ ಕೆಟ್ಟ ಅಭಿನಯ. ನಾಟಕದಲ್ಲಿ ಮಾತಾಡಿದ್ದಕ್ಕಿಂತಲೂ ಕಳಪೆ. ಕ್ಯಾಮರಾ ಕೂಡ ಅಷ್ಟೆ. ಮೋಹನ್ ಪಾತ್ರದಂತಹ ವಿಲನ್ ಇರಲು ಸಾಧ್ಯವೇ ಇಲ್ಲ. ಕೊನೆಗೆ ಗ್ರೂಪ್ ಫೋಟೋ.

....

ಅರ್ಚನಾ ಅಂಥದೇ ಒಂದು ಕೆಟ್ಟ ಚಿತ್ರ. ಚಿತ್ರದ ಮೊದಲ ಕಾಲು ಭಾಗ ಆರತಿ–ಅಶೋಕ್ ಪಾತ್ರದ ಲವ್ವಿಗೆ, ಅನಂತರದ ಕಾಲು ಭಾಗ ಆರತಿ ಪಾತ್ರದ ದುಃಖ ಹೇಳಲಿಕ್ಕೆ, ಅನಂತರ ಅವಳ ಮತ್ತು ಲೋಕೇಶ್ ಪಾತ್ರದ ಲವ್ ಮತ್ತು ಮದುವೆ ಹೇಳಲಿಕ್ಕೆ, ಕೊನೆಯದಾಗಿ ಅಶೋಕ್ ಪಾತ್ರದ 'ಬುರುಡೆ' ಸರಿಯಾಗಿ, ಆರತಿ ಪಾತ್ರ ಸಾಯುವುದು.

ಒಬ್ಬ ಪ್ರೇಮಿ ಮತ್ತು ಒಬ್ಬ ಗಂಡ. ಡೈರೆಕ್ಟರ್ ಏನು ತಾನೆ ಮಾಡಲು ಸಾಧ್ಯ? ಆರತಿ ಪಾತ್ರವನ್ನು ಕೊಲ್ಲಬೇಕುತಾನೆ!?

ಈ ಎರಡು ಸಿನಿಮಾಗಳ ನಿರೂಪಣೆಯ

(೩ನೇ ಪುಟಕ್ಕೆ)

ಓದುಗರ ಪತ್ರಗಳು

"ಅಕ್ಕಿ ಗಿರಣಿ ಪಿಕ್‌ನಿಕ್"

ಇದು ಕೊಪ್ಪ ತಾ.ವ್ಯ.ಮಾ.ಸ.ನಿ. ಅಕ್ಕಿ ಗಿರಣಿಯಿಂದ ಐದಾರು ಮೈಲಿ ದೂರದಲ್ಲಿರುವ ಹಳ್ಳಿಗಳ ಸಾಮಾನ್ಯ ರೈತರಿಗೆ ಮಾತ್ರ ಲಭ್ಯ!

ಪ್ರತಿ ಗುರುವಾರ, ಶುಕ್ರವಾರ, ಯಾ ಶನಿವಾರ ಐದಾರು ಮೈಲಿ ದೂರದವರಾದ ನೀವು ಬೆಳಿಗ್ಗೆ ೫ ಘಂಟೆಗೇ ನಿಮ್ಮ ಮನೆಯಿಂದ ಛಳಿಯಲ್ಲಿ ಹೊರಡಬೇಕು. ೫-೬ ಕ್ವಿಂಟಾಲ್ ಭತ್ತವನ್ನು ನಿಮ್ಮ ಎತ್ತಿನ ಗಾಡಿಯಲ್ಲಿ ಹೇರಿಕೊಂಡು ಮಧ್ಯಾಹ್ನದ ಊಟದ ಬುತ್ತಿ, ಬೆಳಗಿನ ತಿಂಡಿಯ ಬುತ್ತಿ, ಎತ್ತಿಗೆ ತಿನ್ನುವುದಕ್ಕೆ ೧-೨ ಕೆ.ಜಿ. ಹಿಂಡಿ, ೧೦-೨೦ ಕಟ್ಟು ಹುಲ್ಲು, ಒಂದು ಲಾಟೀನು, ೨ ಕಂಬಳಿ ಇಷ್ಟು ನಿಮ್ಮ ಜೊತೆಗಿರಬೇಕು.

ನೀವು ಘಾಟಿಯ ಮೇಲಿರುವ ಕೊಪ್ಪದ ಅಕ್ಕಿಗಿರಣಿ ತಲುಪುವಾಗ್ಗೆ ಏಳು - ಏಳೂ ಮುಕ್ಕಾಲು ಘಂಟೆ ಯಾಗಿರುತ್ತದೆ. 'ಸದ್ಯ ನಾನೇ ಮೊದಲ ವ್ಯಕ್ತಿ' ಅನಿಸಿ ಸಂತಸಗೊಳ್ಳುವಿರಿ.

೮ ಘಂಟೆಗೆ ಸರಿಯಾಗಿ ಗಿರಣಿ ಬಾಗಿಲು ತೆಗೆಯುತ್ತಾರೆ; ಅವರ ಹಿಂದೇನೆ ಕೊಪ್ಪದ ವ್ಯಾಪಾರಿಗಳು ಒಳ ಹೋಗಿ ಹಳೆಯ ಭತ್ತ ನಮ್ಮದಿದೆ ಎಂದು ಗಿರಣಿಗೆ ಸುರುವುತ್ತಾರೆ. ೪ ಮೂಟೆ ಎಂದು ಹೇಳುತ್ತ ಐದಾರು ಜನರಿಂದ ಕೊಂಡ ಭತ್ತವ ನಾಲ್ಕು ನಾಲ್ಕು ಮೂಟೆಯಂತೆ ೩೫-೪೦ ಕ್ವಿಂ. ಸುರಿಯುತ್ತಾರೆ. ಸುಮಾರು ೧೧:೪೫ಕ್ಕೆ ಅವರ ಅಕ್ಕಿಯಾಗಿ, ನಿಮ್ಮ ಭತ್ತ ಸುರಿಯಲು ಆದೇಶ ಬರುತ್ತದೆ. ನೀವು ಸುರುವಿ ೧೦-೨೦ ಕಿಲೋ ಅಕ್ಕಿ ಹೊರಬರುವಷ್ಟರಲ್ಲಿ ಮಧ್ಯಾಹ್ನ ೧೨ಕ್ಕೆ ಕರೆಂಟ್ ಹೋಗುವ ಪದ್ಧತಿಯಂತೆ ಕರೆಂಟ್ ಹೋಗುತ್ತದೆ! ಸಂಜೆ ೬ರ ವರೆಗೆ ನೀವು ಮಿಲ್ ಬಿಟ್ಟು ಕದಲುವಂತಿಲ್ಲ! ಬುತ್ತಿ ಬಿಚ್ಚಿ ಊಟಮಾಡಿ, ನಿದ್ರೆಯನ್ನು ಮಾಡಬಹುದು. ೬ ಘಂಟೆಗೆ ಕರೆಂಟ್ ಬಂದು ೭ ಘಂಟೆ ಸುಮಾರಿಗೆ ನಿಮ್ಮ ಅಕ್ಕಿ ಆಗುತ್ತದೆ. ನೀವು ಊರಿಗೆ ಹೊರಡಲನುವಾದಾಗ ಕೊರೆಯುವ ಚಳಿ, ಕಗ್ಗತ್ತಲು! ಇನ್ನೂ ನಿಮಗಿಂತ ತಡವಾಗಿ ಬಂದ ೭-೮ ಗಾಡಿಯವರನ್ನು ಕಂಡಾಗ ನೀವು ಧನ್ಯರು! ಎನಿಸುತ್ತದೆ.

ಇದು ಮಾಮೂಲಿ ಕತೆ ಎಂದು ಎಲ್ಲರೂ ಹೇಳುವರು. ಈ ವ್ಯಾಪಾರಸ್ಥರು ಬೇರೆ ರೀತಿಯ [ರಾತ್ರಿ ಅಕ್ಕಿಮಾಡಿಸುವ] ವ್ಯವಸ್ಥೆ ಮಾಡಿಕೊಂಡರೆ ೭-೮ ಜನರಿಗೆ ಒಂದು ದಿನದಲ್ಲಿ ಉಪಕರಿಸಿದಂತಾಗುತ್ತದೆ.

ಆದರೆ ಯಾರು ಹೇಳಬೇಕು? ಯಾರು ಕೇಳಬೇಕು!?

—ಹೊಸ್ಮನೆ ರಮೇಶ್.

"ಜನತಾ ಮನೆಗಳಿಗೆ ಹೆಂಚು, ನಾಟ ಒಟ್ಟಿಗೇ ಕೊಡಿಸಿ"

ಕೊಪ್ಪ ತಾಲ್ಲೂಕ್, ನಿಲುವಾಗಿಲು ಗ್ರಾಮ ಪಂಚಾಯಿತಿಗೆ ಈಗ್ಗೆ ೩ ತಿಂಗಳ ಹಿಂದೆ ಜನತಾ ಮನೆಗಳಿಗೆ ಹಂಚು ನಾಟಗಳನ್ನು ಕೊಡುತ್ತೇವೆಂದು ಟಿ.ಡಿ.ಬಿ.ಯವರು ಅರ್ಜಿಗಳ ಮೇರೆಗೆ ಹೆಂಚು ಮಾತ್ರ ಬಂದಿತ್ತು. ನಾಟ ಈವರೆಗೂ ಬಂದಿಲ್ಲ. ತಕ್ಷಣ ನಾಟ ಕೊಡುವ ಏರ್ಪಾಡು ಮಾಡಬೇಕು. ಹೆಂಚು, ನಾಟಗಳನ್ನು ಏಕಕಾಲದಲ್ಲಿ ಕೊಡುವಂತೆ ಆಗಬೇಕು.

—ಹೆಚ್.ಎಂ.ಕೃಷ್ಣಮೂರ್ತಿ, ಹೆಗ್ಗಾರು.

ಪಲಾಯನವಾದಿ ಸಿನಿಮಾ

(೨ನೇ ಪುಟದಿಂದ)

ಲ್ಲಿ ಜೀವಂತತೆ ಇಲ್ಲ. ಜಾಳು ಜಾಳಾದ ಚಿತ್ರಕತೆಗೆ ಕನ್ನಡದ ಉತ್ತಮ ನಟರಾದ ಶ್ರೀನಾಥ್, ಮೋಹನ್, ಆರತಿ, ಲೋಕೇಶ್, ಅಶೋಕ್, ಹೇಗೆ ತಾನೆ ಅಭಿನಯಿರಬೇಕು? ಒಟ್ಟಿನಲ್ಲಿ ಪಾತ್ರ ಚಿತ್ರಣ ಅಸಂಬದ್ಧ.

ಎಲ್ಲಾ ಸಿನಿಮಾದಲ್ಲೂ ಮುಕ್ಕಾಲು ಗಂಟೆ ಲವ್, ಪದ್ಯ, ಮುಕ್ಕಾಲು ಗಂಟೆ ಫೈಟಿಂಗ್, ರೇಪ್; ಅರ್ಧ ಗಂಟೆ ಜಗಳ, ಹಾಸ್ಯ ಇದ್ದೇ ಇರುತ್ತದೆ. ಒಬ್ಬರು ಮಾಡಿದ್ದನ್ನೇ ಹಿಂದೆ ಮುಂದೆ ಜೋಡಿಸಿ ಮತ್ತೊಬ್ಬ ತಯಾರು ಮಾಡುತ್ತಾನೆ. ಎಲ್ಲಾ ಸಿನಿಮಾದಲ್ಲೂ ಗಂಡು, ಹೆಣ್ಣು ಪ್ರೇಮ, ಕಾಮ, ರೇಪ್, ಫೈಟಿಂಪ್, ಪದ್ಯ, ಹಿಂಸೆ ಕೆಟ್ಟ ವಿಲನ್, ಆದರ್ಶಹೀರೋ ತುಂಬಿರುತ್ತಾರೆ. ಆ ಪ್ರಪಂಚಕ್ಕೂ ನಾವು ಬದುಕುವ ಪ್ರಪಂಚಕ್ಕೂ ಮೈಲು ಮೈಲುಗಳ ಅಂತರ.

ಮಾನವನ ಪ್ರೇಮಿಸುವ, ಕಾಮದ, ಕುತೂಹಲದ, ಹಿಂಸಿಸುವ, ಎಲ್ಲಾ ಸಮಸ್ಯೆಗಳಿಗೂ 'ಡಿಶುಂ ಡಿಶುಂ' ಹೀರೋನಲ್ಲಿ ತತ್ಕಾಲದ ಉತ್ತರ ಕಂಡುಕೊಳ್ಳುವ ಪ್ರವೃತ್ತಿಯನ್ನೇ ಉಪಯೋಗಿಸಿಕೊಳ್ಳುತ್ತಾರೆ ನಿರ್ದೇಶಕರು.

ಶುದ್ಧ ಮನರಂಜನೆ, ನಿಜವಾದ ಸಾಮಾಜಿಕ ಕಾಳಜಿಗಳುಳ್ಳ ಸಿನಿಮಾಗಳು ಬರುವುದು ಯಾವಾಗ?

ಶೃಂಗೇರಿಗೆ ಬೆಳಿಗ್ಗೆ ಬಸ್

ಮಾನ್ಯರೆ,

ಕೊಪ್ಪದಿಂದ ಶೃಂಗೇರಿಗೆ ಬೆಳಗ್ಗೆ ೬ ಗಂಟೆಯ ನಂತರ ೮ಗಂಟೆಯವರೆಗೂ ಯಾವುದೇ ಬಸ್ಸು ಇಲ್ಲ. ಆದ್ದರಿಂದ ಬೆಳಿಗ್ಗೆ ಸುಮಾರು ೭ ಅಥವಾ ೭-೧೫ಕ್ಕೆ ಒಂದು ಬಸ್ಸನ್ನು ಶೃಂಗೇರಿ ಕಡೆಗೆ ಓಡಿಸಿದರೆ ಪ್ರಯಾಣಿಕರಿಗೆ ಬಹಳ ಅನುಕೂಲವಾಗುತ್ತದೆ. ಕಿಗ್ಗಕ್ಕೆ ಬೆಳಗಿನ ಬಸ್ಸಿನ ಬದಲು ಇದೇ ಬಸ್ಸನ್ನು ಓಡಿಸಿ, ಪುನಃ ೧೨ ಗಂಟೆಗೆ ಅದು ಕೊಪ್ಪಕ್ಕೆ ತಲುಪುವಂತೆ ಮಾಡಿದರೆ ಬಹಳ ಉಪಯುಕ್ತವಾಗಿರುತ್ತದೆ. ಶಂಕರ್ ಕಂಪನಿಯವರು ಈ ಸಲಹೆಯನ್ನು ಪರಿಶೀಲಿಸಬೇಕೆಂದು ವಿನಂತಿಸುತ್ತೇವೆ.

—ತೊಂದರೆಗೊಳಗಾದ ಪ್ರಯಾಣಿಕರು.

(ಓದಲು ಇವೆ.)

ರಾಜ್ಯದ ಚುನಾವಣೆ: ವಿರೋಧ ಪಕ್ಷಗಳಿಗೆ ಸದವಕಾಶ

ಜನವರಿ ೫ ರಂದು ನಡೆದ ಕರ್ನಾಟಕ ರಾಜ್ಯದ ವಿಧಾನ ಸಭೆಯ ಚುನಾವಣೆ ವಿರೋಧ ಪಕ್ಷಕ್ಕೆ ಒಳ್ಳೆಯ ಅವಕಾಶ ತಂದುಕೊಟ್ಟಿದೆ. ಆದರೆ ವಿರೋಧ ಪಕ್ಷದ ಮುಖಂಡರು ತಮ್ಮ ತಮ್ಮೊಳಗೇ ಜಗಳವಾಡದೆ ಸರ್ಕಾರ ನಡೆಸಿದಲ್ಲಿ ಮುಂದಿನ ಎಲ್ಲಾ ಚುನಾವಣೆಗಳಲ್ಲಿ ವಿರೋಧ ಪಕ್ಷವೇ ಗೆಲ್ಲುವುದು ಖಚಿತ. ಏಕೆಂದರೆ, ರಾಜ್ಯದ ಜನತೆ ಆಡಳಿತ ಪಕ್ಷದ ಹಲವು ಧೋರಣೆಗಳ ಬಗ್ಗೆ ಬೇಸರ ಗೊಂಡಿದ್ದಾರೆ. ಆದ್ದರಿಂದಲೇ ಅವರು ವಿರೋಧ ಪಕ್ಷಕ್ಕೆ ಬೆಂಬಲ ಕೊಟ್ಟಿರುವುದು. ವಿರೋಧ ಪಕ್ಷಗಳವರು ಈ ಅವಕಾಶವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಜನರ ವಿಶ್ವಾಸಕ್ಕೆ ದ್ರೋಹ ಬಗೆಯಬಾರದು.

—ಸಿ.ಎಸ್.ಪುಂಡರೀಕ, ಶೃಂಗೇರಿ.

ಯುವ ಮೇಳದ ಸಮೀಕ್ಷೆ ಬಗ್ಗೆ ಟೀಕೆ: 'ಮಾ.ಶೇ.' ಸ್ಪಷ್ಟನೆ

ಮಾನ್ಯರೆ,

ದಿ. ೨-೧-೮೨ರ 'ಮುಂಜಾವು'ನಲ್ಲಿ ಓದುಗರೊಬ್ಬರು, ಕೊಪ್ಪ ತಾ॥ ಯುವಜನ ಮೇಳದ ಬಗೆಗಿನ ನನ್ನ ಸಮೀಕ್ಷೆ ಕುರಿತು ಮಾಡಿರುವ ಟೀಕೆಗೆ ಪ್ರತಿಕ್ರಿಯಿಸುತ್ತಿದ್ದೇನೆ.

ಯುವ ಮೇಳದಲ್ಲಿ ಒಬ್ಬ ವಿದ್ಯಾರ್ಥಿನಿ ಭಾಗವಹಿಸಿದ್ದನ್ನು ತಾ.ಜ.ಮಂ. ಉಪಾಧ್ಯಕ್ಷೆ ತಡೆದು ಕಾನೂನನ್ನು ಬಿಗಿಯಾಗಿ ಅನ್ವಯಿಸಿದ್ದು ಸರಿಯೇ. ಆದರೆ ಮೇಳದಲ್ಲಿ ಇನ್ನೂ ಕೆಲವು ವಿದ್ಯಾರ್ಥಿಗಳು ಭಾಗವಹಿಸಿದ್ದು, ಅದು ಉಪಾಧ್ಯಕ್ಷೆಯವರಿಗೆ ಗೊತ್ತಿದ್ದರೂ ಸುಮ್ಮನಿದ್ದಾರೆಂದೂ, ಬೇಕೆಂತ ರಾಜಕೀಯ ಮಾಡುತ್ತಿದ್ದಾರೆಂದೂ ಅಲ್ಲಿ ಕೆಲವರು ಆಡಿಕೊಳ್ಳುತ್ತಿದ್ದುದನ್ನು ಆಧರಿಸಿ 'ರಾಜಕೀಯ.....' ಎಂದು ಬರೆಯಲಾಗಿದೆ.

ಇನ್ನು, ಅರ್ಹತೆಯುಳ್ಳದವರು ಭಾಗವಹಿಸಿದ್ದನ್ನು ಗುರುತಿಸುವುದೂ ಖಂಡಿಸುವುದೂ ಒಬ್ಬ ಹೊರಗಿನವನಾದ ಪತ್ರಕರ್ತನಿಗೆ ಸಾಧ್ಯವೂ ಇಲ್ಲದ್ದು; ಅದು ಅವನ ಸದ್ಯದ ಕರ್ತವ್ಯದ ವ್ಯಾಪ್ತಿಯಿಂದ ಹೊರಗಿನದೂ ಆಗುತ್ತದೆ. ಅದೇನಿದ್ದರೂ ಪ್ರಜ್ಞಾವಂತ ಶಿಬಿರಾರ್ಥಿಗಳ ಕೆಲಸ.

ಮೂರನೆಯದಾಗಿ, ವೈಯುಕ್ತಿಕವಾಗಿ ಗುರ್ತಿಸುವಾಗ ಯಾರೋ ಒಬ್ಬರನ್ನೇ ಗುರ್ತಿಸಿಲ್ಲ. ಅತಿ ಹೆಚ್ಚು ಪ್ರತಿಭೆ ತೋರಿಸಿದವರಲ್ಲಿ ಮೂವರನ್ನು ಹೆಸರಿಸಿದ್ದೇನೆ. ಹೆಚ್ಚು ಬಹುಮಾನ ಪಡೆದ ಯುವಕ / ಯುವತಿ ಮಂಡಳಿಗಳ ಹೆಸರನ್ನು ಹೇಳಿಸಬಹುದಾಗಿತ್ತಾದರೂ ಹಾಗೂ ಮಾಡಲೇ ಬೇಕೆಂದೇನೂ ಇಲ್ಲ. ಏಕೆಂದರೆ ನಮಗೆ ಕೊಟ್ಟ ಸ್ಥಳಾವಕಾಶ ಸಮಯ, ಇತ್ಯಾದಿಗಳನ್ನೂ ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ.

ಈ ವಿಷಯಗಳನ್ನೆಲ್ಲ ಪರಿಶೀಲಿಸಿದರೆ 'ಸಮೀಕ್ಷೆ ಅಸಮರ್ಪಕ' ಎಂದು ಸದರಿ ಓದುಗರು ಹೇಳಿದ್ದು ಸಮಂಜಸವಲ್ಲ ಎಂಬುದು ಸ್ಪಷ್ಟವಾಗುತ್ತದೆ.

—ಮಾ.ಶೇ.ಗಣಪತಿ.

ಭ್ರಷ್ಟಾಚಾರ ನಿರ್ಮೂಲನ - ದಕ್ಷ ಆಡಳಿತ

(೨ನೇ ಪುಟದಿಂದ)

ಬರುವ ಅಡ್ಡಿಗಳು ಸೋಲಕೊಡಗುತ್ತವೆ. ಆಗ ಮಾತ್ರ ಸಮಾಜದಲ್ಲಿ ಭ್ರಷ್ಟಾಚಾರ ಪೂರ್ಣವಾಗಿ ನಿರ್ಮೂಲವಾಗಬಹುದು. ಈ ರೀತಿಯಲ್ಲಿ ಯಶಸ್ಸು ಕಂಡ ದೇಶಗಳೂ ನಮ್ಮ ಮುಂದೆ ಇವೆ.

ಆದರೆ ಈಗಿನ ಸರ್ಕಾರಕ್ಕೆ ಇಷ್ಟೆಲ್ಲ ಸಾಧ್ಯತೆ ಇದೆಯೆ? ಜೀವಮಾನ ಪೂರ್ತಿ (ವಂಶಪಾರಂಪರ್ಯವಾಗಿ ಕೂಡ) ಕೂಲಿಯಿಂದಲೇ ಬದುಕುವವರು, ಜಮೀನೇ ಇಲ್ಲದವರು, ಸಮಾಜದಲ್ಲಿ ಕೀಳಾಗಿ ಕಾಣಲ್ಪಟ್ಟವರು, ಸದಾ ಬಡತನದಲ್ಲೇ ಬೇಯುತ್ತಿರುವವರು ಮುಂತಾದವರ ಕಷ್ಟ-ಸುಖ, ಆಶೋತ್ತರಗಳನ್ನು ಬೇರೆಯವರು ಎಷ್ಟೇ ಅರ್ಥಮಾಡಿಕೊಂಡಿದ್ದೇವೆಂದರೂ ಅದನ್ನು ಸ್ವತಃ ಉಂಡು, ಅನುಭವಿಸಿದವರು ಮಾತ್ರ ಸರಿಯಾಗಿ ಅರ್ಥ ಮಾಡಿಕೊಳ್ಳಬಲ್ಲರು, ಅದಕ್ಕೆ ಪರಿಹಾರ ಮಾರ್ಗ ಯೋಚಿಸಬಲ್ಲರು, ಅಂಥವರು ಈಗಿನ ಶಾಸಕ ವರ್ಗದಲ್ಲಿ ಎಷ್ಟು ಜನ ಸಿಕ್ಕಿಯಾರು? ಒಬ್ಬಿಬ್ಬರು ಸಿಗುವುದೂ ಅನುಮಾನ. ಆದ್ದರಿಂದ ಈಗಿನ ಆಳುವವರು ತರಬಲ್ಲ ಸುಧಾರಣೆಗಳಿಗೆ ಒಂದು ದೊಡ್ಡ ಮಿತಿ ಇದೆ.

ಹಾಗಾದರೆ ಏನೂ ಸುಧಾರಣೆಯಾಗಲಿಕ್ಕಿಲ್ಲವೆ? ಖಂಡಿತ ಸಾಧ್ಯವಿದೆ. ಪ್ರಾಮಾಣಿಕವಾಗಿ ಕೆಲಸ ಮಾಡುವ ಶಾಸಕರು, ಅಧಿಕಾರಿಗಳು ಇರುವ ಕಡೆ ಅವರು ಮಾಡಿದಷ್ಟಂತೂ ಜನರಿಗೆ ಸಿಗುತ್ತದೆ. ಈಗಿನ ಜನತಾ ಶಾಸಕ ಬಳಗದಲ್ಲಿ ಪ್ರಾಮಾಣಿಕತೆಗೆ ಹೆಸರಾದವರು ಹಲವರಿದ್ದಾರೆ. ಹಾಗೆಯೇ ಅಧಿಕಾರಿ ವರ್ಗದಲ್ಲೂ ಹಲವರು ಖ್ಯಾತಿಗಳಿಸಿದವರಿದ್ದಾರೆ. ಇವರುಗಳೆಲ್ಲ ಒಟ್ಟಾಗಿ ತಮ್ಮ ಈವರೆಗಿನ ಹೆಸರನ್ನು ಉಳಿಸಿಕೊಳ್ಳುವಂತೆ ನಡೆದುಕೊಂಡರೆ ಕೆಳಮಟ್ಟಗಳಲ್ಲೂ ಪ್ರಾಮಾಣಿಕತೆಗೆ ಪ್ರೇರಣೆ ದೊರೆತೀತು. ಆಗ ಸರ್ಕಾರದಲ್ಲಿ ಜನರ ವಿಶ್ವಾಸವೂ ಹೆಚ್ಚಿ ಜನ ಬೆಂಬಲವೂ ಹೆಚ್ಚು ಹೆಚ್ಚು ದೊಡ್ಡ ಹೆಜ್ಜೆಗಳಿಗೆ ಪ್ರೇರಣೆ ನೀಡೀತು.

ಜೊತೆಗೆ, ಹೊಸದಾಗಿ ಯೋಜನೆಗೇನೇನೂ ಹಾಕುವ ಅಗತ್ಯವೇ ಇಲ್ಲ. ಈಗಾಗಲೇ ಅಸಮರ್ಪಕವಾಗಿ, ದೂರದೃಷ್ಟಿಯಿಲ್ಲದೆ ಜಾರಿಗೆ ತಂದ ಯೋಜನೆಗಳನ್ನೇ ಸರಿಪಡಿಸಿ, ಅವುಗಳ ಪ್ರಯೋಜನ ಮಧ್ಯವರ್ತಿಗಳ ಪಾಲಾಗದೆ ಯಾರಿಗೆ ತಲುಪಬೇಕೋ ಅವರಿಗೆ ತಲುಪುವಂತೆ ಮಾಡಿದರೂ ಸಾಕು, ಜನರ ಜೀವನ ಎಷ್ಟೋ ಉತ್ತಮವಾಗುತ್ತದೆ.

ಇಷ್ಟಾದರೂ ಸುಧಾರಣೆ ಮಾಡುವ ಶಕ್ತಿ ಈಗಿನ ಸರ್ಕಾರಕ್ಕೆ ಇದೆ. ಜನ ಇಷ್ಟನ್ನಂತೂ ಸದ್ಯಕ್ಕೆ ನಿರೀಕ್ಷಿಸಬಹುದು, ನಿರೀಕ್ಷಿಸಿಯೂ ಇದ್ದಾರೆ.

ಬಾವಿಗಳ ಪ್ರಕರಣ: ಬಿಡಿಓರವರಿಂದ ಸೂಕ್ತ ಕ್ರಮದ ಭರವಸೆ

ಕೊಪ್ಪ: ಗಡಿಕಲ್ ಬಳಿಯ ಚಿಕ್ಕನ ಕೊಡಿಗೆಯಲ್ಲಿ ತಾ. ಅ. ಮಂಡಳಿಯಿಂದ ಮಂಜೂರಾದ ಬಾವಿಯನ್ನು ಖಾಸಗಿಯವರೊಬ್ಬರ ಕಾಂಪೌಂಡ್ ಒಳಗಡೆ ನಿರ್ಮಿಸಿದ್ದು ಹೊರಗಿನವರು ಅದರ ಉಪಯೋಗ ಪಡೆಯಲು ಸಾಧ್ಯವಿಲ್ಲವಾಗಿದೆ, ದಿನವೂ ಜಗಳಕ್ಕೆ ಕಾರಣವಾಗಿದೆ ಎಂದು 'ಮುಂಜಾವು'ಗೆ ದೂರು ಬಂದಿತ್ತು. ಈ ಬಗ್ಗೆ ಇಲ್ಲಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಬರೆದ ಪತ್ರಕ್ಕೆ ಪ್ರತಿಯಾಗಿ ಅವರು ಸ್ಥಳಕ್ಕೆ ಭೇಟಿ ಕೊಟ್ಟು ಸೂಕ್ತ ವ್ಯವಸ್ಥೆ ಮಾಡಿರುವುದಾಗಿ 'ಮುಂಜಾವು'ಗೆ ತಿಳಿಸಿದಾರೆ. ಗೇಟ್ ತೆಗೆದು ಹೊರಗಿನವರಿಗೆ ಯಾವುದೇ ಅಡ್ಡಿಯಿಲ್ಲದಂತೆ ಅವಕಾಶ ಮಾಡಿಕೊಡುವುದಾಗಿ ಸದರಿ ಜಾಗದವರು ಭರವಸೆ ಕೊಟ್ಟಿರುವುದಾಗಿ ಅವರು ಹೇಳಿದ್ದಾರೆ. ಈ ಸಮಸ್ಯೆ ಇನ್ನೂ ಬಗೆಹರಿದಿಲ್ಲವಾದರೆ ಕೂಡಲೇ ಕ್ರಮ ತೆಗೆದು ಕೊಳ್ಳುವುದಾಗಿ ಅವರು ಭರವಸೆ ಕೊಟ್ಟಿದ್ದಾರೆ.

ಬಾವಿ ಕೆಲಸ ಸ್ಥಗಿತ

ಹರಿಹರಪುರ ಬಳಿಯ ಸೂರ್ಳಿಯಲ್ಲಿ ಕೇವಲ ಒಂದು ಮನೆಗೆ ಹತ್ತಿರವಾಗಿ ಒಂದು ಬಾವಿ ನಿರ್ಮಿಸುತ್ತಿದ್ದು, ಈ ಮನೆಗೆ ಹತ್ತಿರದಲ್ಲೇ ಬೋರ್‌ವೆಲ್ ಇದೆಯೆಂದೂ, ಅದರ ಬದಲು ಮೇಲು ಸೂರ್ಳಿಯ ಜನತಾ ಕಾಲೊನಿ ಹಾಗೂ ಅದರ ಪಕ್ಕದ ಹರಿಜನ ಕಾಲೋನಿಗಳ ಮಧ್ಯೆ ಬಾವಿ ತೆಗೆಸಬೇಕೆಂದೂ ಅಲ್ಲಿನವರು ಬಿಡಿಓಗೆ ಮನವಿ ಮಾಡಿ, ಅದರ ಒಂದು ಪ್ರತಿ 'ಮುಂಜಾವು'ಗೆ ಕಳಿಸಿದ್ದರು. ಈ ಬಾವಿಯ ನಿರ್ಮಾಣವನ್ನು ನಿಲ್ಲಿಸಲು ತಾವು ಆದೇಶಿಸಿದ್ದು, ಸದ್ಯದಲ್ಲೇ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ತೆಗೆದು ಕೊಳ್ಳುವುದಾಗಿ ಬಿಡಿಓ 'ಮುಂಜಾವು'ಗೆ ತಿಳಿಸಿದ್ದಾರೆ.

ಹರಿಜನ ಕೇರಿಗಳಿಗೆ ಕುಡಿವ ನೀರಿನ ಬಾವಿಗಳಿಲ್ಲ

ಕಲ್ಲುಗುಡ್ಡೆ: ಇಲ್ಲಿನ ಹರಿಜನ ಕಾಲೋನಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯು ಸರಿಯಿಲ್ಲದೆ ಜನರು ತುಂಬಾ ಬವಣೆಯುತ್ತಿದ್ದಾರೆ. ಒಂದು ಕಾಲೋನಿಯಲ್ಲಂತೂ ಬಾವಿಯೇ ದುರಸ್ತಿಯಿಲ್ಲ. ಇನ್ನೊಂದು ಕಾಲೋನಿಗೆ ಬರೀ ಆಶ್ವಾಸನೆಯೇ ಆಗಿದೆ. ಸಂಬಂಧಪಟ್ಟವರು ಈ ಬಗ್ಗೆ ಗಮನ ಹರಿಸಬೇಕೆಂದು ಇಲ್ಲಿನ ಹರಿಜನರು ವಿನಂತಿಸುತ್ತಾರೆ.

ಪುರಂದರ, ತ್ಯಾಗರಾಜರ ಆರಾಧನಾ ಮಹೋತ್ಸವ

ಸೂರಳಿ: ಇಲ್ಲಿನ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಫೆ.೨ ಮತ್ತು ೩ರಂದು ಪುರಂದರ ದಾಸರ ಮತ್ತು ತ್ಯಾಗರಾಜರ ಆರಾಧನಾ ಮಹೋತ್ಸವ ನಡೆಯುತ್ತದೆ. ಎರಡು ದಿನಗಳಲ್ಲೂ ಬೇರೆ ಬೇರೆ ಕಲಾವಿದರಿಂದ ಹಾಡುಗಾರಿಕೆ ಮತ್ತು ವಿವಿಧ ವಾದ್ಯ ಸಂಗೀತಗಳಿರುತ್ತವೆ. ಮಲೆನಾಡಿನ ಈ ಭಾಗದಲ್ಲಿ ಸ್ವಲ್ಪ ಅಪರೂಪದ್ದಾದ ಇಂಥ ಆರಾಧನಾ ಮಹೋತ್ಸವವನ್ನು ಪ್ರತಿ ವರ್ಷ ನಡೆಸಿಕೊಂಡುಬರಲು ಆರಾಧನಾ ಸಮಿತಿ ಉದ್ದೇಶಿಸಿದೆ.

ಶಾಲಾ ವಾರ್ಷಿಕ ಬಹುಮಾನ ವಿತರಣೆ ಸಮಾರಂಭ

ಬಸರೀಕಟ್ಟೆ: ಇಲ್ಲಿನ ಸದ್ಗುರು ಪ್ರೌಢ ಶಾಲೆಯ ವಾರ್ಷಿಕ ಬಹುಮಾನ ವಿತರಣಾ ಸಮಾರಂಭ ಜ. ೧೭ರಂದು ನಡೆಯುತ್ತದೆ. ಹೇರೂರು ಪಂಚಾಯ್ತಿ ಅಧ್ಯಕ್ಷ ಹೆಚ್.ಪಿ. ಚಂದ್ರಯ್ಯ ಹೆಗ್ಡೆ ಅಧ್ಯಕ್ಷರು. ಜಿಲ್ಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೆ.ಕೆ.ಆನಂದ ಮುಖ್ಯ ಅತಿಥಿಗಳು. ಬೆಳಿಗ್ಗೆ ಧ್ವಜಾರೋಹಣ ಮತ್ತು ವಿದ್ಯಾರ್ಥಿಗಳಿಗೆ ಹಿತನುಡಿ ಇಲ್ಲಿನ ಸಿಂಡಿಕೇಟ್ ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಸಿದ್ದಲಿಂಗಪ್ಪ ಅವರಿಂದ.

ಈ ವರ್ಷದ ಮೈಸೂರು ವಿಭಾಗ ಮಟ್ಟದ ಕ್ರೀಡಾಕೂಟದಲ್ಲಿ ಈ ಶಾಲೆಯ ಥ್ರೋಬಾಲ್ ತಂಡ ಭಾಗವಹಿಸುವುದಲ್ಲದೆ, ಬಾಲಕಿಯರ ವಿಭಾಗದ ಗುಂಡೆಸೆತ ಮತ್ತು ಚಕ್ರದ ಎಸೆತದಲ್ಲಿ ಕು||ಎಸ್.ಆರ್.ಸುಕನ್ಯಾ ಮತ್ತು ಬಾಲಕರ ವಿಭಾಗದ ಹ್ಯಾಮರ್ ಎಸೆತ ಹಾಗೂ ಚಕ್ರದ ಎಸೆತದಲ್ಲಿ ವಿನ್ಸೆಂಟ್ ಪಿರೇರಾ ಭಾಗವಹಿಸುವವರಿದ್ದಾರೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಎಡಿಗೆರೆ ಟೀಮಿಗೆ ಕ್ರಿಕೆಟ್ ಗೆಲುವು

ಕೊಪ್ಪ: ಜ. ೧೩ರಂದು ನಡೆದ ಪಂದ್ಯದಲ್ಲಿ ಇಲ್ಲಿನ ಪ್ರ.ದ.ಕಾಲೇಜು ಟೀಮಿನ ಮೇಲೆ ಎಡಿಗೆರೆಯ ಸಂತೋಷ್ ಕ್ರಿಕೆಟ್ ಟೀಮು ೫೨ ರನ್ನುಗಳ ಜಯ ಪಡೆಯಿತು. ವಿಜೇತರ ಪರ ಸುದರ್ಶನ (೫ ವಿಕೆಟ್) ಮತ್ತು ಸತ್ಯನಾರಾಯಣ (೭) ಉತ್ತಮ ಬೌಲಿಂಗ್ ಮಾಡಿದರೆ, ಡಿ.ಎಂ.ರಾಘವೇಂದ್ರ ಉತ್ತಮವಾಗಿ ಬ್ಯಾಟ್ ಮಾಡಿದರು. ಕಾಲೇಜು ಟೀಮಿನ ಭಾಸ್ಕರ (೫ವಿಕೆಟ್,೧೭ ರನ್) ಬೌಲಿಂಗ್–ಬ್ಯಾಟಿಂಗ್‌ಗಳೆರಡರಲ್ಲೂ ಮಿಂಚಿದರು.

ಸ್ಕೋರುಗಳು: ಎಡಿಗೆರೆ—೭೩–೫೪; ಕಾಲೇಜು—೩೨ ಮತ್ತು ೨೭.

ಲಯನ್ಸ್‌ಕ್ಲಬ್‌ನಿಂದ ಮಕ್ಕಳಿಗೆ ಔಷಧಿ ಹಂಚಿಕೆ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್‌ನವರು ಪ್ರಬೋಧಿನೀ ಶಿಶು ಮಂದಿರದ ಮಕ್ಕಳಿಗಾಗಿ ಒದಗಿಸಿದ್ದ ಔಷಧಿಗಳನ್ನು ಜ. ೪ರಂದು ನಡೆದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಲಯನ್ಸ್ ಜಿಲ್ಲಾ ಗೌರ್ನರ್ ಡಾ|| ಕೆ.ಬಾಬು ಶೆಟ್ಟಿ ವಿತರಣೆ ಮಾಡಿ, ಶಿಶು ಮಂದಿರದ ಆಡಳಿತ ಮಂಡಳಿಯ ಹಾಗೂ ಕ್ಲಬ್‌ನ ಸ್ತುತ್ಯ ಕಾರ್ಯವನ್ನು ಹೊಗಳಿದರು.

ವೆಂಕಟೇಶ ಭಟ್ ಸ್ವಾಗತಿಸಿದರು. ಅಧಿಕ ಸಂಖ್ಯೆಯಲ್ಲಿ ಮಾತೃ ಮಂಡಳಿಯ ಸದಸ್ಯೆಯರು ಸೇರಿದ್ದರು. ಡಾ|| ಮೋಹನ್‌ಶೆಟ್ಟಿ ಮಾತ್ರೆ – ಟಾನಿಕ್‌ಗಳ ಸೇವನೆಯ ಕ್ರಮ ವಿವರಿಸಿದರು. ಶ್ರೀನಿವಾಸ ರಾವ್ ವಂದಿಸಿದರು.

ಗಣರಾಜ್ಯೋತ್ಸವ ಕ್ರೀಡಾ ಸ್ಪರ್ಧೆ

ಕೊಪ್ಪ: ಗಣರಾಜ್ಯೋತ್ಸವದ ಅಂಗವಾಗಿ ಕೊಪ್ಪ ತಾಲ್ಲೂಕ್ ಮಟ್ಟದ ಪುರುಷರ ವಾಲಿಬಾಲ್ ಹಾಗೂ ಮಹಿಳೆಯರ ಥ್ರೋಬಾಲ್ ಪಂದ್ಯಗಳನ್ನು ಗಣರಾಜ್ಯೋತ್ಸವ ಸಮಿತಿ ಏರ್ಪಡಿಸಿದೆ. ಈ ಸ್ಪರ್ಧೆಗಳು ತಾ|| ೨೩–೧–೮೩ರಂದು ಬೆಳಿಗ್ಗೆ ೯ ಗಂಟೆಯಿಂದ ಕೊಪ್ಪ ಕಿರಿಯ ಕಾಲೇಜಿನ ಮೈದಾನದಲ್ಲಿ ನಡೆಯಲಿವೆ. ಭಾಗವಹಿಸಲಿಚ್ಛಿಸುವ ಶಾಲೆ, ಕಾಲೇಜು ಮತ್ತು ಸಂಘ ಸಂಸ್ಥೆಗಳು ತಮ್ಮ ಪ್ರವೇಶ ಪತ್ರಗಳನ್ನು ಹೆಚ್.ಎ. ಗೋಪಾಲ, ದೈಹಿಕ ಶಿಕ್ಷಣ ಶಿಕ್ಷಕರು, ಸರ್ಕಾರಿ ಕಿರಿಯ ಕಾಲೇಜು, ಕೊಪ್ಪ, ಇವರಿಗೆ ತಾ|| ೨೦–೧–೮೩ರ ಒಳಗೆ ಕಳುಹಿಸಬೇಕಾಗಿ ಕೋರಿದೆ.

ಸಂಕ್ಷಿಪ್ತ ಸುದ್ದಿಗಳು

ಉತ್ತಮೇಶ್ವರ ಜಾತ್ರೆ

ಉತ್ತಮೇಶ್ವರ: ಇಲ್ಲಿನ ಉತ್ತಮೇಶ್ವರ ಸ್ವಾಮಿ ಮಹಾರಥೋತ್ಸವ ಜ. ೧೭ರಂದು ನಡೆಯಲಿದೆ. ಜ. ೧೫ರಿಂದ ೧೯ರ ವರೆಗೆ ಜಾತ್ರೆ ನಡೆಯುತ್ತದೆ.

ಲಕ್ಷ ದೀಪೋತ್ಸವ

ಕುಡಿನಲ್ಲಿ (ಹಾಲ್ಮುತ್ತೂರು): ಇಲ್ಲಿನ ಸಂತಾನ ಗೋಪಾಲಕೃಷ್ಣ ಸ್ವಾಮಿ ಸನ್ನಿಧಿಯಲ್ಲಿ ಎಂದಿನಂತೆ ವೈಭವದ ಲಕ್ಷ ದೀಪೋತ್ಸವವು ದೈವಭಕ್ತ ಶೇಷಣ್ಣ ಗೌಡರ ನೇತೃತ್ವದಲ್ಲಿ ಡಿಸೆಂಬರ್ ೨೦ರಂದು ನಡೆಯಿತು.

ಯುವಕರೈತಸಂಘಕ್ಕೆ ಆಯ್ಕೆ

ಕುದ್ರೆಗುಂಡಿ: ಇಲ್ಲಿನ ವಿನಾಯಕ ಯುವಕ ರೈತ ಸಂಘಕ್ಕೆ ೧೯೮೩ನೇ ಇಸವಿಗೆ ಈ ಕೆಳಕಂಡವರು ಪದಾಧಿಕಾರಿಗಳಾಗಿದ್ದಾರೆ: ಹೆಚ್.ವಿ.ಚಕ್ರಪಾಣಿ (ಅಧ್ಯಕ್ಷ), ಬಿ.ಕೆ. ನಾರಾಯಣಸ್ವಾಮಿ (ಉಪಾಧ್ಯಕ್ಷ), ಎ.ಎಲ್.ಮೋಹನರಾವ್ (ಕಾರ್ಯದರ್ಶಿ), ಶಾಂತಕುಮಾರ್, ಹೆಚ್. ಎಸ್. ಕೃಷ್ಣಕುಮಾರ್, ಯು.ರಾಧಾಕೃಷ್ಣ ಮತ್ತು ೯ ಮಂದಿ ಕಾರ್ಯಕಾರಿ ಸಮಿತಿ ಸದಸ್ಯರು.

ಗ್ರಾಮ ದತ್ತು

ತಲಮಕ್ಕಿ ಗ್ರಾಮವನ್ನು ಕೊಪ್ಪದ ಲಯನ್ಸ್ ಕ್ಲಬ್ ದತ್ತು ತೆಗೆದುಕೊಂಡ ಸಮಾರಂಭ ಲಯನ್ ಡಾ|| ಎಸ್.ಎಂ.ಶಾನ್‌ಭಾಗ್‌ರವರ ಅಧ್ಯಕ್ಷತೆಯಲ್ಲಿ ಜ. ೪ರಂದು ನಡೆಯಿತು. ಮುಖ್ಯ ಅತಿಥಿಗಳಾಗಿದ್ದ ಲಯನ್ಸ್ ಜಿಲ್ಲಾ ಗೌರ್ನರ್ ಡಾ|| ಕೆ.ಬಾಬು ಶೆಟ್ಟಿ ವಾಚನಾಲಯ ಉದ್ಘಾಟಿಸಿದರು. ಟಿ.ಸಿ.ಮಹಾಬಲ ಸ್ವಾಗತಿಸಿ, ಹೆಚ್.ವಿ. ಚಕ್ರಪಾಣಿ ವಂದಿಸಿದರು.

ತಲಮಕ್ಕಿ ಗ್ರಾಮ ಪಂಚಾಯ್ತಿಯು ಕಂದಾಯ ಶೇ. ೧೦೦ರಷ್ಟು ಸಂಗ್ರಹವಾಗಿದ್ದು, ಮ್ಯಾಚಿಂಗ್ ಗ್ರಾಂಟ್‌ಗೆ ಅರ್ಹತೆ ಪಡೆದಿದೆ.

ಉತ್ತಮ ಗ್ರಾಮ ಪಂಚಾಯ್ತಿಗಳು

ಕೊಪ್ಪ: ೧೯೮೨-೮೩ನೇ ಸಾಲಿನ ಜಿಲ್ಲಾ ಮಟ್ಟದ ಉತ್ತಮ ಗ್ರಾಮ ಪಂಚಾಯ್ತಿಗಳ ಸ್ಪರ್ಧೆಯಲ್ಲಿ ಕೊಪ್ಪ ತಾ||ನ ನರಸೀಪುರ(ನಾರ್ವೆ) ಹಾಗೂ ತಲಮಕ್ಕಿ ಗ್ರಾಮಗಳು ಮೊದಲ ಎರಡು ಸ್ಥಾನಗಳನ್ನು ಗೆದ್ದಿವೆ. ಮೂರನೇ ಸ್ಥಾನವನ್ನು ತರೀಕೆರೆ ತಾ||ನ ತ್ಯಾಗದಕಟ್ಟೆ ಗ್ರಾಮ ಪಡೆದಿದೆ.

ಹಾಲು ಸಂಗ್ರಹಣೆ ಕೇಂದ್ರ ಆರಂಭಿಸಲು ಎಮ್ಮೆ ಪಡೆದ ಬಡವರ ಮನವಿ

(೧ನೇ ಪುಟದಿಂದ)

ಈಗೆರಡು ವರ್ಷಗಳ ಹಿಂದೆ ಡಿಐಆರ್ ಸಾಲ ಅಂತ ಹಂಚಿ, ಅದನ್ನು ತೆಗೆದುಕೊಂಡವರೂ ಬ್ಯಾಂಕಿನವರೂ ನ.ರಾ.ಪುರದ ಕೋರ್ಟಿಗೆ ಅಲೆಯುವಂತಹ ಪರಿಸ್ಥಿತಿ ಬಂದಿತ್ತು. ಈಗ ಹಾಗಾಗಬಾರದು—ಎಂದು, ಈ ಬಡವರ ಬಗ್ಗೆ ಕಳಕಳಿ ಇರುವ ರೈತ ಯುವಕರು ಹೇಳುತ್ತಾರೆ.

ಚುನಾವಣೆ ವಿಶೇಷಗಳು

§ ಕಳೆದ ವಿಧಾನ ಸಭೆಯಲ್ಲಿದ್ದ ಏಳು ಜನ ಮಹಿಳಾ ಸದಸ್ಯೆಯರಾದ ರೇಣುಕಾ ರಾಜೇಂದ್ರನ್, ಮನೋರಮಾ ಮಧ್ವರಾಜ್, ಅನಸೂಯ ಗಜಾನನ ಶರ್ಮ, ಪ್ರಮೀಳಾ, ಮೋಟಮ್ಮ, ಸುಶೀಲಾ ಚೆಲುವ ರಾಜ್ ಹಾಗೂ ನಾಗಮ್ಮ ಕೇಶವ ಮೂರ್ತಿ ಎಲ್ಲರೂ ಸೋತಿದಾರೆ. ಈಬಾರಿ ೩೮ ಮಹಿಳೆಯರು ಸ್ಪರ್ಧಿಸಿದ್ದು, ಕೇವಲ ಇಬ್ಬರು ಮಾತ್ರ — ಕಾಂಗ್ರೆಸ್ಸಿನ ಕೆ.ಎಸ್.ನಾಗರತ್ನಮ್ಮ, ಮತ್ತು ಜನತಾರಂಗದ ಚಂದ್ರಪ್ರಭಾ ಅರಸು—ಆಯ್ಕೆಯಾಗಿದ್ದಾರೆ.

§ ನಂಜನಗೂಡಿನಲ್ಲಿ ಕಾಂಗ್ರೆಸ್ಸಿನ ಮಹದೇವ ಜನತಾದ ನರಸೇಗೌಡರನ್ನು ಕೇವಲ ೪೫ ಮತಗಳಿಂದ ಸೋಲಿಸಿದರು.

§ ವರ್ತೂರು (ಬೆಂಗಳೂರು ಜಿಲ್ಲೆ), ಉಳ್ಳಾಲ (ದ.ಕ.) ಮತ್ತು ಮುಳಬಾಗಿಲು (ಕೋಲಾರ) ಕ್ಷೇತ್ರಗಳಲ್ಲಿ ಗೆದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ೧೫ ವರ್ಷಗಳ ನಂತರ ಪುನಃ ರಾಜ್ಯ ವಿಧಾನ ಸಭೆಯನ್ನು ಪ್ರವೇಶಿಸಿದೆ. ೧೯೬೭ರಲ್ಲಿ ಅದು ಒಂದು ಸ್ಥಾನ ಪಡೆದಿತ್ತು. ಕೋ.ಚಿ.೧ಣ ಕ್ಷೇತ್ರದಿಂದ ಗೆದ್ದ ಅಣ್ಣಾ ಡಿಎಂಕೆ ಮೊದಲ ಪ್ರವೇಶ ಮಾಡಿದೆ.

§ ಬೆಂಗಳೂರು ಬಿನ್ನಿ ಪೇಟೆ ಹಾಗೂ ಚಾಮರಾಜ ನಗರ (ಮೈಸೂರು ಜಿಲ್ಲೆ) ಕ್ಷೇತ್ರಗಳಿಂದ ಸ್ಪರ್ಧಿಸಿದ್ದ ವಾಟಾಳ್ ನಾಗರಾಜ್ ಎರಡೂ ಕಡೆ ಸೋತಿದ್ದಾರೆ.

§ ಶೃಂಗೇರಿ ಕ್ಷೇತ್ರದಲ್ಲಿ ೮೯,೧೯೯ ಮತಗಳ ಪೈಕಿ ೫೭,೦೬೫ ಮತಗಳು(ಶೇ.೬೭.)ಚಲಾವಣೆಯಾಗಿವೆ.೩೦,೨೫೦ ಮತ ಪಡೆದ ಗೋವಿಂದಗೌಡರು ೨೪,೩೪೪ ಮತ ಪಡೆದ ಬೇಗಾನೆ ರಾಮಯ್ಯನವರಿಗಿಂತ ೫,೯೦೬ ಹೆಚ್ಚು ಮತಗಳನ್ನು ಪಡೆದು ಗೆದ್ದರು. ಪಕ್ಷೇತರ ಅಭ್ಯರ್ಥಿ ಪ್ರಭಾಕರ್‌ಗೆ ೫೭೯ ಹಾಗೂ ಇಬ್ರೋಸ್‌ಗೆ ೧೨೫ ಮತಗಳು ಬಂದಿದ್ದು, ೭೧೩ ಮತಗಳು ಕುಲಗೆಟ್ಟವು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ.